# ದಾರ್ಶನಿಕ ಅನ್ವೇಷಣೆ

◆ ಸ್ವಾಮಿ ರಾಮಾನುಜಾನಂದ

'ದರ್ಶನ' ಎಂಬ ಶಬ್ದಕ್ಕೆ ಹಲವು ಅರ್ಥಗಳಿವೆ—ನೋಡುವುದು, ಕಣ್ಣು, ಬುದ್ಧಿ, ತೀರ್ಮಾನ, ಕನ್ನಡಿ, ಧರ್ಮ, ತತ್ತ್ವಶಾಸ್ತ್ರ ಇತ್ಯಾದಿ. ನೋಡುವುದು ಎಂಬ ಅರ್ಥವು ತತ್ತ್ವಶಾಸ್ತ್ರ ಎಂಬ ಅರ್ಥವನ್ನು ಕೊಡುತ್ತದೆ. ಏಕೆಂದರೆ ಮನುಷ್ಯನಿಗೆ ಜ್ಞಾನ ಸಂಗ್ರಹಣೆಯ ಪ್ರಮುಖ ಉಪಾಯ ನೋಡುವುದು ಮತ್ತು ಕೇಳುವುದು. ತತ್ತ್ವಶಾಸ್ತ್ರಜ್ಞನು ಜಗತ್ತನ್ನು ನೋಡಿ, ಜಗತ್ತಿನ ಸೃಷ್ಟಿ ಮುಂತಾದ ವಿಚಾರಗಳನ್ನು ಅರಿಯಲು ಸಮರ್ಥನಾಗುತ್ತಾನೆ. ಆದುದರಿಂದ ಆ ಶಾಸ್ತ್ರಕ್ಕೆ ದರ್ಶನವೆಂಬ ಹೆಸರು ಬಂತು.

ಜಗತ್ತಿನಲ್ಲಿ ಎಷ್ಟು ದರ್ಶನಗಳಿವೆಯೆಂಬುದನ್ನು ಯಾರೂ ಖಚಿತವಾಗಿ ಹೇಳಲಾರರು. ನಮಗೆ ಲಭ್ಯವಿರುವ ವಿಶ್ವಕೋಶಗಳನ್ನು ನೋಡಿದರೆ, ಸಾವಿರಾರು ದರ್ಶನಗಳಿವೆಯೆಂದು ತಿಳಿದು ಬರುತ್ತದೆ. ತತ್ತ್ವಶಾಸ್ತ್ರಕ್ಕೆ ದರ್ಶನವೆಂಬ ಹೆಸರು ಹೇಗೆ ಬಂತು ಎಂಬ ವಿಚಾರವಾಗಿ ಹಲವಾರು ಊಹಾಪೋಹಗಳು ನಡೆದಿವೆ. ತತ್ತ್ವಶಾಸ್ತ್ರವೆಂದರೆ ತನ್ನ ಇರುವಿಕೆಯ ಕುರಿತು, ಜಗತ್ತಿನ ಉತ್ಪತ್ತಿಲಯಗಳ ಕುರಿತು, ಜ್ಞಾನದ ಸ್ವರೂಪದ ಕುರಿತು ಮನುಷ್ಯನು ನಡೆಸುವ ವಿಚಾರ. ವಿಕಾಸದ ಪ್ರಕ್ರಿಯೆ ಮನುಷ್ಯಪ್ರಜ್ಞೆಯ ಹಂತ ತಲುಪಿದ ಮೇಲೆ ಜಗತ್ತಿನಲ್ಲಿ ಒಂದು ವಿಶೇಷ ಬದಲಾವಣೆಯನ್ನು ಕಾಣಬಹುದು. ಮನುಷ್ಯನಿಗೆ ಹೊರತಾದ ಯಾವ ಪ್ರಾಣಿಗೂ ವಿಚಾರಶಕ್ತಿ ಇಲ್ಲ, ಆದರೆ ಮನುಷ್ಯನಿಗೆ ಈ ಅದ್ಭುತ ಶಕ್ತಿ ಇರುವ ಕಾರಣ ಆತ ಯೋಚಿಸತೊಡಗುತ್ತಾನೆ. ತಾನು ಯಾರು? ತಾನು ಎಲ್ಲಿಂದ ಬಂದಿದ್ದೇನೆ ಮತ್ತು ಎಲ್ಲಿಗೆ ಹೋಗುತ್ತಿದ್ದೇನೆ? ಬೇರೆ ಮನುಷ್ಯರೊಡನೆ ತನ್ನ ಸಂಬಂಧವೇನು? ಇತ್ಯಾದಿ ಹಲವು ಪ್ರಶ್ನೆಗಳು ಮನುಷ್ಯನನ್ನು ಕಾಡುತ್ತವೆ. ಇಂತಹ ಪ್ರಶ್ನೆಗಳು ಬರಲು ಕಾರಣವೇನು? ಅವನು ಜಗತ್ತನ್ನು ನೋಡುತ್ತಾನೆ, ದರ್ಶಿಸುತ್ತಾನೆ. ಆದುದರಿಂದ ಈ ಪ್ರಶ್ನೆಗಳು ಉದಯವಾದವು. ಹಾಗಾಗಿ ತತ್ತ್ವಶಾಸ್ತ್ರಕ್ಕೆ ದರ್ಶನವೆಂಬ ಹೆಸರು ಬಂತು—ಇದು ಕೆಲವರ ಊಹೆ.

ಇನ್ನು ತತ್ತ್ವಶಾಸ್ತ್ರದ ಕೆಲವು ಶಾಖೆಗಳನ್ನು ಕುರಿತು ವಿಚಾರ ಮಾಡಬಹುದು. ತಾನು ಇದ್ದೇನೆ ಎಂಬ ಅರಿವು ಪ್ರತಿಯೊಬ್ಬನಿಗೂ ಇದೆ. ಹಾಗಾದರೆ ಈ 'ತಾನು' ಯಾರು? ಅತ್ಯಂತ ಭೌತವಾದಿಗಳು (materialists) ಈ ಶರೀರದೊಂದಿಗೆ ಸೇರಿರುವ ಮನಸ್ಸೇ 'ತಾನು' ಎನ್ನುತ್ತಾರೆ. ಅವರ ಅಭಿಪ್ರಾಯವೆಂದರೆ, ಒಬ್ಬ ವ್ಯಕ್ತಿಯ ಜನ್ಮದೊಂದಿಗೆ ಈ 'ತಾನು'ವಿನ ಉತ್ಪತ್ತಿಯಾಗುತ್ತದೆ, ಆ ವ್ಯಕ್ತಿಯು ಮೃತನಾದಾಗ ಈ 'ತಾನು'ವೂ ನಾಶವಾಗುತ್ತದೆ. ಹಾಗಾಗಿ ಮನುಷ್ಯ ಒಂದು ಯಂತ್ರಕ್ಕೆ ಸಮಾನನೆಂಬುದು ಇವರ ಅಭಿಪ್ರಾಯ.

ಈ ಅಭಿಪ್ರಾಯವನ್ನು ಎಲ್ಲರೂ ಒಪ್ಪಲಾರರು. ಶರೀರ, ಮನಸ್ಸುಗಳಲ್ಲದೆ ಬೇರೊಂದು ಜೀವಾತ್ಮ ಇದೆ, ಶರೀರವು ಸಾಯುವಾಗ ಜೀವಾತ್ಮನು ಸಾಯುವುದಿಲ್ಲ ಎಂದು ಕೆಲವರು ಹೇಳುತ್ತಾರೆ. ಹಾಗಾದರೆ ಈ ಜೀವಾತ್ಮನು ಯಾರು? ಅವನ ಸ್ವರೂಪವೇನು? ದಾರ್ಶನಿಕರಲ್ಲಿ ಇದನ್ನು ಕುರಿತು ವಿಭಿನ್ನ ಅಭಿಪ್ರಾಯಗಳಿವೆ. ಜೀವಾತ್ಮನು ಅಣುವಿನಂತೆ ಎಂಬ ಅಭಿಪ್ರಾಯದಿಂದ ಹಿಡಿದು ಜೀವಾತ್ಮನು ಸರ್ವವ್ಯಾಪಿ ಎಂಬುವವರೆಗೆ ಅಭಿಪ್ರಾಯಭೇದವಿದೆ.

ಸನಾತನ ಹಿಂದೂಧರ್ಮ ಈ ಅಭಿಪ್ರಾಯಭೇದಗಳನ್ನು ಎರಡು ಭಾಗಗಳಾಗಿ ವರ್ಗೀಕರಿಸಿತು. ಒಂದು ವರ್ಗದವರು ಹಿಂದೂ ಧರ್ಮದ ಆದಿಗ್ರಂಥಗಳಾದ ವೇದಗಳನ್ನು ಪ್ರಮಾಣವಾಗಿ ಒಪ್ಪುವವರು, ಹಾಗೂ ಎರಡನೆಯವರು ಒಪ್ಪದವರು ಎಂದು. ವೇದಗಳ ಪ್ರಾಮಾಣ್ಯವನ್ನು ಒಪ್ಪದ ದರ್ಶನಗಳನ್ನು ನಾಸ್ತಿಕ ದರ್ಶನಗಳೆಂದೂ ಅವುಗಳ ಪ್ರಾಮಾಣ್ಯವನ್ನು ಒಪ್ಪುವ ದರ್ಶನಗಳನ್ನು ಆಸ್ತಿಕ ದರ್ಶನಗಳೆಂದೂ ಕರೆಯುತ್ತಾರೆ. ಮೊದಲನೆಯದಾಗಿ ಕೆಲವು ನಾಸ್ತಿಕ ದರ್ಶನಗಳನ್ನು ಸ್ಥೂಲವಾಗಿ ಪರಿಚಯಿಸಿಕೊಳ್ಳೋಣ.

**ಚಾರ್ವಾಕ ಮತದ** ಪ್ರಕಾರ ದೇಹವೇ ಆತ್ಮ. ಬೌದ್ಧರು ಆತ್ಮನು ಶೂನ್ಯವೆಂದು ವಾದಿಸುತ್ತಾರೆ. ಭಗವಾನ್ ಬುದ್ಧನು ಆತ್ಮನ ಅಸ್ತಿತ್ವದ ಕುರಿತಾಗಿ ಯಾವ ಅಭಿಪ್ರಾಯವನ್ನೂ ಕೊಡಲಿಲ್ಲ. ಆದರೆ ಬೌದ್ಧರು ಆತ್ಮನಿಲ್ಲವೆಂಬ ಸಿದ್ಧಾಂತವನ್ನು ಮಂಡಿಸುತ್ತಾರೆ. ಜೈನರು ಆತ್ಮನು ಜ್ಞಾನ–ದರ್ಶನಸ್ವರೂಪಿಯಾದ ಚೈತನ್ಯವಸ್ತು ಎನ್ನುತ್ತಾರೆ. ಆತ್ಮನು ನಿತ್ಯ. ಅವರ ಅಭಿಪ್ರಾಯದಲ್ಲಿ ಶರೀರದ ಪರಿಮಾಣವೇ ಆತ್ಮನ ಪರಿಮಾಣ. ಪಾಪ ಪುಣ್ಯಗಳು ಆತ್ಮನನ್ನು ಬಂಧಿಸುತ್ತವೆ. ಸಮ್ಯಕ್ ಜ್ಞಾನದಿಂದ ಎಲ್ಲ ಬಂಧನಗಳನ್ನೂ ನಿವಾರಿಸಬಹುದು.

ಬೌದ್ಧರ ಶೂನ್ಯವಾದದ ಕುರಿತು ಒಂದು ಕಥೆಯಿದೆ. ಹಿಮಾಲಯದ ಪರ್ವತಪ್ರದೇಶದಲ್ಲಿ ತೀರ್ಥಯಾತ್ರಿಕರು ಆಹಾರ ಸಾಮಗ್ರಿಗಳನ್ನು ಖರೀದಿಸಿ, ತಾವೇ ಬೇಯಿಸಿ, ಊಟಮಾಡಿ ಮುಂದುವರೆಯುತ್ತಾರೆ. ಹೀಗೆ ಪ್ರಯಾಣ ಹೊರಟಿದ್ದ ಕೆಲವು ಭಕ್ತರು ಒಂದು ಅಂಗಡಿಯಲ್ಲಿ ಒಬ್ಬ ಬಾಲಕ ಕುಳಿತಿರುವುದನ್ನು ಕಂಡು ತಮಗೆ ಆಹಾರ ಸಾಮಗ್ರಿಗಳನ್ನು ಕೊಡಬೇಕು ಎಂದು ಕೇಳಿದಾಗ, "ಇಲ್ಲಿ ಯಾರೂ ಇಲ್ಲ" ಎಂದು ಉತ್ತರಿಸಿದ. ಪ್ರಯಾಣಿಕರು, ಅತಿ ಅಗತ್ಯವಾಗಿ ತಮಗೆ ಆಹಾರ ಸಾಮಗ್ರಿಗಳು ಬೇಕಾಗಿವೆ ಎಂದು ಕೇಳಿಕೊಂಡರೂ ಬಾಲಕ "ಇಲ್ಲಿ ಯಾರೂ

ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳಾಗಿರುವ, ಕೇರಳದ ತಿರುವಳ್ಳದಲ್ಲಿರುವ ರಾಮಕೃಷ್ಣ ಆಶ್ರಮದ ಸ್ವಾಮಿ ರಾಮಾನುಜಾನಂದರು ಭಗವದ್ಗೀತೆ, ವಿವೇಕಚೂಡಾಮಣಿ ಮೊದಲಾದ ಅನೇಕ ಗ್ರಂಥಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದಾರೆ.

ಇಲ್ಲ" ಎಂದೇ ಉತ್ತರಿಸಿದ. ಏಕೆಂದರೆ ಅವನ ತಂದೆಯು ಅವನಿಗೆ ಹಾಗೆ ಹೇಳಬೇಕೆಂದು ತಿಳಿಸಿಹೋಗಿದ್ದ. ಆಗ ಒಬ್ಬ ಪ್ರಯಾಣಿಕನು ತಿಳಿಸಿಕೊಟ್ಟ, "ಎಲೈ ಮಗು, ನೀನು ಹೀಗೆ ಏಕೆ ಹೇಳುತ್ತೀ? ನೀನು ಇಲ್ಲಿ ಇರುವಾಗ, 'ಯಾರೂ ಇಲ್ಲ' ಎಂದು ಹೇಳುವುದು ಸರಿಯಲ್ಲ." ಈ ಕಥೆಯಿಂದ ನಮಗೆ ತಿಳಿದು ಬರುವುದೇನೆಂದರೆ, ಪೂರ್ಣ ಶೂನ್ಯತೆ ಸಾಧ್ಯವಿಲ್ಲ. ಆ ಮಗು "ಇಲ್ಲಿ ಯಾರೂ ಇಲ್ಲ" ಎಂದು ಹೇಳುವಾಗ, ಹಾಗೆ ಹೇಳುವ ಮಗು ಅಲ್ಲಿಯೇ ಇದೆ. ಹಾಗೆಯೇ ಆತ್ಮ ವಿಲ್ಲವೆಂದು ಬೌದ್ಧ ದಾರ್ಶನಿಕನು ಹೇಳುವಾಗ ಹೇಳುವವನು ಅಲ್ಲಿಯೇ ಇದ್ದಾನೆ. ಅಂದರೆ ಆತ್ಮನಿಲ್ಲದಿದ್ದರೆ, ಅವನಿಗೆ ಹಾಗೆ ಹೇಳುವ ಸಾಮರ್ಥ್ಯವಾದರೂ ಎಲ್ಲಿಂದ ಬರುವುದು? ಇಲ್ಲವೆಂದು ಹೇಳುವವನು ಇದ್ದಾನಾದ್ದರಿಂದ ಅವನು ಸತ್ಯ.

ಇನ್ನು **ಜೈನ ದಾರ್ಶನಿಕರು** ಮಂಡಿಸಿದ ವಾದವು ಬಹಳ ಸ್ವಾರಸ್ಯಕರವಾಗಿದೆ. ಅವರ ಪ್ರಕಾರ—ಆತ್ಮವು ಶರೀರದ ಆಕೃತಿಯುಳ್ಳದ್ದು. ಮಗುವಿನ ಶರೀರವು ಬೆಳೆಯುವಂತೆ ಆತ್ಮವೂ ಬೆಳೆಯುತ್ತದೆ. ಒಬ್ಬ ವ್ಯಕ್ತಿಯು ಕೈಕಾಲುಗಳನ್ನು ಕಳೆದುಕೊಂಡರೆ, ಆತ್ಮವೂ ವಿಕಲಗೊಂಡು ಸಂಕುಚಿತವಾಗುತ್ತದೆ. ಇವರ ಈ ವಾದ ವನ್ನು ಬೇರೆ ದಾರ್ಶನಿಕರು ನಿರಾಕರಿಸಿ ಆತ್ಮವು ಬದಲಾವಣೆ ಅಥವಾ ಸಂಕೋಚ, ವಿಕಾಸಗಳನ್ನು ಹೊಂದುವುದಿಲ್ಲ ಎಂದು ವಾದಿಸುತ್ತಾರೆ.

**ಆಸ್ತಿಕ ದರ್ಶನಗಳು** ಆರು —**ವೈಶೇಷಿಕ, ನ್ಯಾಯ, ಸಾಂಖ್ಯ, ಯೋಗ, ಮೀಮಾಂಸಾ, ವೇದಾಂತ.** ವೈಶೇಷಿಕ ದರ್ಶನದ ಪ್ರವರ್ತಕರು ಕಣಾದ ಮಹರ್ಷಿಗಳು. ಆಧುನಿಕ ವಿಜ್ಞಾನಕ್ಕಿಂತ ಎಷ್ಟೋ ಮುಂಚೆ ಈ ಜಗತ್ತು ಪರಮಾಣುಗಳ ಸಂಕಲನವೆಂದು ಸಾರಿದ ಕೀರ್ತಿ ಈ ದರ್ಶನದ್ದು. ವೈಶೇಷಿಕ ಹಾಗೂ ನೈಯಾಯಿಕ ದರ್ಶನಗಳ ಪ್ರಕಾರ ದೇಹ, ಇಂದ್ರಿಯ, ಮನಸ್ಸು, ಬುದ್ಧಿ ಇವುಗಳಿಗಿಂತ ಆತ್ಮ ಬೇರೆ. ಆತ್ಮ ನಿತ್ಯ ಮತ್ತು ವಿಭು. ಜೀವಾತ್ಮ ಪರಮಾತ್ಮನಿಗಿಂತಲೂ ಭಿನ್ನ. ಪರಮಾತ್ಮ ಒಬ್ಬನೇ, ಜೀವಾತ್ಮರು ಅಸಂಖ್ಯಾತರು. ಪರಮಾತ್ಮ ಸರ್ವಶಕ್ತ. ಕುಂಬಾರನು ಮಡಕೆಗೆ ನಿಮಿತ್ತಕಾರಣವಾಗಿರುವಂತೆ ಪರಮಾತ್ಮನೂ ಜಗತ್ತಿನ ನಿಮಿತ್ತಕಾರಣ. ಜೀವಾತ್ಮನು ಧರ್ಮ, ಅಧರ್ಮ ಇತ್ಯಾದಿ ಗುಣಗಳುಳ್ಳವನು. ದುಃಖಧ್ವಂಸವೆ ಮೋಕ್ಷ. ಇದು ಇವರ ಅಭಿಪ್ರಾಯ.

ಸಾಂಖ್ಯದರ್ಶನದಲ್ಲಿ ಚತುರ್ವಿಂಶತಿ ತತ್ತ್ವಕ್ಕಿಂತಲೂ ಭಿನ್ನ ನಾದ ಪುರುಷನೇ ಆತ್ಮ; ಆಕಾಶದಲ್ಲಿ ಅಸಂಖ್ಯಾತ ನಕ್ಷತ್ರಗಳಿರು ವಂತೆ ಆತ್ಮಗಳ ಸಂಖ್ಯೆಯೂ ಅನೇಕ. ಆತನು ನಿತ್ಯ, ನಿರ್ಗುಣ, ನಿಷ್ಕ್ರಿಯ, ನಿರ್ಲಿಪ್ತ. ಪ್ರಕೃತಿ ಪುರುಷರ ಸಂಬಂಧದಿಂದ ಸುಖ ದುಃಖಗಳು ತಲೆದೋರುವುವು. ಆ ಸಂಬಂಧ ವಿಚ್ಛೇದನೆಯೇಮೋಕ್ಷ.

**ಯೋಗದರ್ಶನವೆಂದೊಡನೆಯೇ** ನಾವು ಆಸನ, ಪ್ರಾಣಾ ಯಾಮಗಳೆಂದು ಯೋಚಿಸುತ್ತೇವೆ. ಆದರೆ ಅವುಗಳ ಹಿನ್ನೆಲೆಯಲ್ಲಿ ಒಂದು ತತ್ತ್ವಜ್ಞಾನವಿದೆ. ಪುರುಷನು ಜೀವಾತ್ಮನೆಂದೂ ಈಶ್ವರ ನೆಂದೂ ಎರಡು ವಿಧ. ಜೀವಾತ್ಮನು ಈಶ್ವರ ಪ್ರಣಿಧಾನದಿಂದ, ಈಶ್ವರನನ್ನು ಕುರಿತ ಧ್ಯಾನದಿಂದ ಸಮಾಧಿ ಪಡೆಯಬಹುದು. ಇದೇ ಮೋಕ್ಷ. ಸಾಂಖ್ಯದರ್ಶನಕ್ಕೂ ಯೋಗದರ್ಶನಕ್ಕೂ ಹಲವು ಸಾಮ್ಯಗಳಿವೆ. ಸಾಂಖ್ಯದಲ್ಲಿ ಈಶ್ವರನನ್ನು ಕುರಿತ ಉಲ್ಲೇಖವೇ ಇಲ್ಲ. ಯೋಗದರ್ಶನವಾದರೋ ಈಶ್ವರನೆಂದರೆ ಪುರುಷ ವಿಶೇಷವೆಂದು ಪ್ರತಿಪಾದಿಸುತ್ತದೆ. ಇಲ್ಲಿ ಈಶ್ವರನೆಂದರೆ ಸರ್ವ ಶಕ್ತನಾದ ಪ್ರಭುವಲ್ಲ, ಬರೀ ಪುರುಷವಿಶೇಷ ಮಾತ್ರ. ಆದುದ ರಿಂದ ಯೋಗವನ್ನು ಕೆಲವರು ಸೇಶ್ವರ ಸಾಂಖ್ಯವೆಂದು ಕರೆಯು ತ್ತಾರೆ.

ದಾರ್ಶನಿಕರಲ್ಲಿ ವೇದಗಳ ಕರ್ಮಕಾಂಡದ ಹಿರಿಮೆಯನ್ನು ಸಾಧಿಸುವವರನ್ನು **ಮೀಮಾಂಸಕರು** ಎನ್ನುತ್ತಾರೆ. ಇವರು ಕರ್ಮಠರು. ವೇದಗಳ ಜ್ಞಾನಕಾಂಡದ ಹಿರಿಮೆಯನ್ನು ಒಪ್ಪು ವವರನ್ನು **ವೇದಾಂತಿಗಳು** ಎನ್ನುತ್ತಾರೆ. ಅವರಲ್ಲೂ **ಅದ್ವೈತಿಗಳು, ವಿಶಿಷ್ಟಾದ್ವೈತಿಗಳು, ದ್ವೈತಿಗಳು** ಎಂಬ ವರ್ಗಗಳಿವೆ. ಅದ್ವೈತ ಮತದಲ್ಲಿ ಆತ್ಮನು ಒಬ್ಬನೇ. ಅವನು ನಿತ್ಯ, ವಿಭು, ನಿತ್ಯ ಮುಕ್ತ. ಆದರೂ, ಅಜ್ಞಾನದ ದೆಸೆಯಿಂದ, ತಾನು ಸಂಸಾರಿ, ಬಂಧನದಲ್ಲಿದ್ದೇನೆ ಎಂಬ ಭ್ರಮೆಯನ್ನು ಹೊಂದುತ್ತಾನೆ. ಪರಿಣಾಮವಾಗಿ ಆತನು ಜಗತ್ತಿನಲ್ಲಿ ಸುಖ ಕಷ್ಟಗಳನ್ನು ಅನುಭವಿಸುತ್ತಾನೆ. ಆತ್ಮ ಮತ್ತು ಪರಮಾತ್ಮ ಇವರಲ್ಲಿ ಯಾವ ಭೇದವೂ ಇಲ್ಲ. ಅಂತಹ ಆತ್ಮನಿಗೆ ಹೇಗೆ ಬಂಧನವುಂಟಾ ಯಿತೆಂದು ಹೇಳಲು ಸಾಧ್ಯವಿಲ್ಲ. ಈ ಬಂಧನ, ಅಜ್ಞಾನಕ್ಕೆ ಕಾರಣ ಮಾಯೆ. ಆತ್ಮನು ತನ್ನ ಪಾರಮಾರ್ಥಿಕ ಸ್ವರೂಪವನ್ನು ತಿಳಿದು ಕೊಂಡಾಗ ಆತನು ಬಂಧನದಿಂದ ಮುಕ್ತನಾಗುತ್ತಾನೆ. ನಾವು ಕನ್ನಡಿಯಲ್ಲಿ ಪ್ರತಿಬಿಂಬವನ್ನು ನೋಡುತ್ತೇವೆ. ಕನ್ನಡಿಗಳ ಸಂಖ್ಯೆ ಹೆಚ್ಚಿದಂತೆ, ಪ್ರತಿಬಿಂಬಗಳೂ ಹೆಚ್ಚಾಗುತ್ತವೆ. ಕನ್ನಡಿಗಳನ್ನು ದೂರ ಮಾಡಿದಾಗ ಪ್ರತಿಬಿಂಬಗಳೂ ಮಾಯವಾಗುತ್ತವೆ. ಹಾಗೆಯೇ ಒಬ್ಬನೇ ಆತ್ಮನು ಉಪಾಧಿಭೇದದಿಂದ ದೇವತೆ ಯಾಗಿ, ಮನುಷ್ಯನಾಗಿ, ರಾಕ್ಷಸನಾಗಿ ಅಥವಾ ಪ್ರಾಣಿಯಾಗಿ ಗೋಚರಿಸುತ್ತಾನೆ. ಅಜ್ಞಾನವನ್ನು ಹೋಗಲಾಡಿಸಿದರೆ, ಮುಕ್ತಿಯು ಕರಗತವಾಗುವುದು.

**ವಿಶಿಷ್ಟಾದ್ವೈತ ದರ್ಶನ**ದ ಪ್ರಕಾರ ಜೀವಾತ್ಮನು ಅಣುಪರಿಮಾಣ ವುಳ್ಳವನು, ಅಜನು, ನಾಶರಹಿತನು, ನಿತ್ಯನು. ಪ್ರತಿಯೊಂದು ದೇಹ ದಲ್ಲಿರುವುದರಿಂದ ಅಸಂಖ್ಯಾತನು, ಜ್ಞಾನಸ್ವರೂಪನು, ಸುಖ ಸ್ವರೂಪನು. ಜೀವಿಗಳಲ್ಲಿ ನಿತ್ಯ, ಮುಕ್ತ ಮತ್ತು ಬದ್ಧ ಎಂದು ಮೂರು ವಿಧ.

**ದ್ವೈತ ದರ್ಶನವು** ಜೀವಾತ್ಮಗಳು ಅಸಂಖ್ಯ ಎನ್ನುತ್ತದೆ. ಈ ದರ್ಶನವು ಪರಮಾತ್ಮ ಮತ್ತು ಜೀವಾತ್ಮರಲ್ಲಿರುವ ಭೇದವು ನಿತ್ಯವೆಂದು ಸಾರುತ್ತದೆ.

ಜಗತ್ತಿನ ಅಸ್ತಿತ್ವದ ಕುರಿತು ದಾರ್ಶನಿಕರು ಅನೇಕ ಅಭಿಪ್ರಾಯಗಳನ್ನು ನೀಡಿದ್ದಾರೆ. ಒಬ್ಬ ಸಾಧಾರಣ ವ್ಯಕ್ತಿಗೆ ಇವರ ಅರಿವಾಗದು. ಏಕೆಂದರೆ ಆತನು ಜಗತ್ತು ಇದೆಯೋ ಇಲ್ಲವೊ

ಎಂಬ ಪ್ರಶ್ನೆಯನ್ನು ಕಲ್ಪಿಸಲಾರ; ಅವನ ದೃಷ್ಟಿಯಲ್ಲಿ ಜಗತ್ತು ಯಾವಾಗಲೂ ಇದೆ. ದಾರ್ಶನಿಕರು ಹೇಳುವುದೇನೆಂದರೆ ಜಗತ್ತು ಇದೆ ಎಂಬ ಅಭಿಪ್ರಾಯವೂ ಮನಸ್ಸಿನ ಕಲ್ಪನೆ ಮಾತ್ರ. ಅವರು ತಮ್ಮ ವಾದವನ್ನು ಸುಷುಪ್ತಿಯ ದೃಷ್ಟಾಂತದ ಮೂಲಕ ಮಂಡಿಸುತ್ತಾರೆ. ಗಾಢ ನಿದ್ರೆಯ ಸಮಯದಲ್ಲಿ ಜಗತ್ತು ಎಲ್ಲಿದೆ? ಎಂಬ ಪ್ರಶ್ನೆಗೆ ಎಚ್ಚೆತ್ತಿರುವವರು ಜಗತ್ತನ್ನು ಅನುಭವಿಸುತ್ತಿದ್ದಾರೆ ಎಂದು ಉತ್ತರಕೊಡುತ್ತಾರೆ ಸಾಮಾನ್ಯರು. ಆದರೆ ಮಲಗಿರುವವನಿಗೆ ಜಗತ್ತಿನ ಅನುಭವ ಆಗುವುದಿಲ್ಲ. ಎದ್ದ ಮೇಲೆ ಪುನಃ ಜಗತ್ತಿನ ಅರಿವು ಬರುತ್ತದೆ. ಆದ್ದರಿಂದ ದಾರ್ಶನಿಕರು ನಾವೇ ಜಗತ್ತನ್ನು ಕಲ್ಪಿಸಿಕೊಳ್ಳುತ್ತೇವೆ ಎಂದು ಹೇಳುತ್ತಾರೆ.

ದರ್ಶನಶಾಸ್ತ್ರವು ಜಗತ್ತಿನ ಸೃಷ್ಟಿ ಹೇಗಾಯಿತೆಂದು ತಿಳಿಯಲು ಪ್ರಯತ್ನಿಸಿದೆ ನಿಜ, ಆದರೆ ದಾರ್ಶನಿಕರಲ್ಲಿ ಒಮ್ಮತವಿಲ್ಲ. ಜಗತ್ತು ತನ್ನಿಂದ ತಾನೇ, ಯಾವ ಚೈತನ್ಯದ ಆಧಾರವೂ ಇಲ್ಲದೆ ಸೃಷ್ಟಿಯಾಯಿತೆಂದು ಭೌತವಿಜ್ಞಾನಿಗಳು ವಾದಿಸುತ್ತಾರೆ. ಆದರೆ ಆಸ್ತಿಕ ದಾರ್ಶನಿಕರು ಚೈತನ್ಯವಿಲ್ಲದೆ ಇಂತಹ ಸುಂದರ ಜಗತ್ತಿನ ಸೃಷ್ಟಿ ಅಸಾಧ್ಯವೆಂದು ನಂಬುತ್ತಾರೆ. ಪುರಾಣಗಳಲ್ಲಿ ಸೃಷ್ಟಿಯ ವರ್ಣನೆಗಳಿವೆ. ಭಾಗವತವು ಕಾಲ, ಕರ್ಮ ಮತ್ತು ಸ್ವಭಾವಗಳು ಮೊದಲು ಸೃಷ್ಟಿಸಲ್ಪಟ್ಟವು ಎಂದು ಹೇಳುತ್ತದೆ. ಅಂದರೆ, ಕಾಲದ ಪ್ರಭಾವದಿಂದ ಸತ್ವ, ರಜಸ್, ತಮಸ್ಸುಗಳೆಂಬ ಮೂರು ಗುಣಗಳ ಸಮತ್ವಭಾವವು ಇಲ್ಲದಾಯಿತು. ಅದೇ ಸೃಷ್ಟಿಯ ಪ್ರಾರಂಭ. ಕಾಲದ ಪ್ರಭಾವವನ್ನು ನಾವು ಕ್ಷಣಕ್ಷಣವೂ ಅನುಭವಿಸುತ್ತೇವೆ. ಸುಖದ ಒಂದು ವರ್ಷವು ಒಂದು ಕ್ಷಣದಂತೆ ಕಳೆದು ಹೋಗುವುದು. ದುಃಖದ ಒಂದು ಕ್ಷಣವಾದರೋ ಒಂದು ವರ್ಷದಂತೆ ತೋರುವುದು. ಆಸಕ್ತಿಯಿಂದ ಪುಸ್ತಕ ಓದುತ್ತಿರುವಾಗ ಸಮಯ ಹೋಗುವುದೇ ಗೊತ್ತಾಗುವುದಿಲ್ಲ. ಹೀಗೆ ಕಾಲವು ಕೂಡ ಸಾಪೇಕ್ಷ ಎಂದು ಸಾಬೀತಾಗುತ್ತದೆ.

ಎರಡನೆಯದಾಗಿ ಕರ್ಮ. ಅಂದರೆ ಒಂದು ಕರ್ಮಕ್ಕೆ ಒಂದು ಫಲ ಇದ್ದೇ ಇರುತ್ತದೆ. ಈ ಶಾಸನವು ಅನುಷ್ಠಾನಕ್ಕೆ ಬಂದ ಮೇಲೆ ಜಗತ್ತು ಜೀವಿಗಳ ಕರ್ಮಾನುಸಾರ ಅಸ್ತಿತ್ವಕ್ಕೆ ಬಂದಿದೆ.

ಮೂರನೆಯದಾಗಿ ಸ್ವಭಾವ. ಅಂದರೆ ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ಧರ್ಮವಿದೆ. ಸುಡುವುದು ಬೆಂಕಿಯ ಧರ್ಮ, ತೋಯಿಸುವುದು ನೀರಿನ ಧರ್ಮ. ಆದರೆ ಆತ್ಮ ಅವಸ್ತು, ಅದರ ಸ್ವಭಾವ ಸತ್, ಚಿತ್, ಆನಂದ. ಜಗತ್ತು ನಿರಂತರವಾಗಿ ಪರಿವರ್ತನಶೀಲ. ಬದಲಾಗುತ್ತಿರುವುದೇ ಅದರ ಸ್ವಭಾವ. ಆದರೆ ಇದನ್ನು ಸಾಕ್ಷಿಯಾಗಿ ವೀಕ್ಷಿಸಿ, ಅನುಭವಿಸುವ ಆತ್ಮ ಮಾತ್ರ ಬದಲಾಗುವುದಿಲ್ಲ.

ಬಹುಶಃ ಎಲ್ಲ ದಾರ್ಶನಿಕರೂ ಆನಂದವನ್ನು ಅನುಭವಿಸುವುದು ಜೀವನದ ಗುರಿ ಎನ್ನುತ್ತಾರೆ. ಆದರೆ ಆನಂದವು ಹೇಗೆ ಉಂಟಾಗುತ್ತದೆ ಎಂಬ ವಿಚಾರದಲ್ಲಿ ಒಮ್ಮತವಿಲ್ಲ. ಶರೀರವೇ ಆತ್ಮವೆಂದು ಹೇಳುವ ಭೌತವಾದಿಗಳು ಪಂಚೇಂದ್ರಿಯಗಳಿಂದ ಉಂಟಾಗುವ ಸುಖವೇ ಪರಮಸುಖವೆಂದು ಸಾಧಿಸುತ್ತಾರೆ. ಶರೀರದ ಅನಿತ್ಯತೆಯನ್ನು ಮನಗಂಡ ಇತರರು ಈ ವಾದವನ್ನು ಒಪ್ಪುವುದಿಲ್ಲ. ಶೂನ್ಯವಾದಿಗಳು ಶೂನ್ಯತ್ವವನ್ನು ಹೊಂದುವುದೇ ಪರಮಸುಖವೆಂದು ಹೇಳುತ್ತಾರೆ. ಅಂದರೆ, ದುಃಖದ ಅಭಾವವೇ ಸುಖ. ಮನಸ್ಸು ಇರುವ ಕಾರಣ ನಾವು ದುಃಖವನ್ನು ಅನುಭವಿಸುತ್ತೇವೆ. ಈ ಮನಸ್ಸಿನ ನಾಶವಾದಾಗ ಯಾವ ದುಃಖವೂ ಇರಲಾರದು. ಆದುದರಿಂದ ಮನೋನಾಶಕ್ಕಾಗಿ ಪ್ರಯತ್ನಿಸಬೇಕು ಎನ್ನುತ್ತಾರೆ. ಶೂನ್ಯವಾದಿಗಳಲ್ಲದ ದಾರ್ಶನಿಕರು ಮನೋನಾಶವನ್ನು ಅಲ್ಲಗಳೆಯುವುದಿಲ್ಲ. ಆದರೆ ಅವರ ಮತದಂತೆ, ಮನಸ್ಸು ಸ್ವತಂತ್ರವಾಗಿ ಇರಲಾರದು. ಅದಕ್ಕೆ ಜೀವಾತ್ಮನ ಸಂಪರ್ಕ ಇದೆ. ಜೀವಾತ್ಮನಲ್ಲಿ ದೋಷಗಳಿದ್ದರೆ, ಮನಸ್ಸನ್ನು ತಿದ್ದಲು ಸಾಧ್ಯವಿಲ್ಲ. ಆದುದರಿಂದ ಜೀವಾತ್ಮನು ಯಾರು ಎಂಬುದನ್ನು ತಿಳಿಯಬೇಕು ಎಂಬುದು ಕೆಲವರ ಮತ. ಕೆಲವರು ಮತ್ತೂ ಮುಂದೆ ಹೋಗಿ ಜೀವಾತ್ಮನು ಸ್ವತಂತ್ರನಲ್ಲ, ಅವನು ಪರಮಾತ್ಮನ ಅಧೀನ, ಪರಮಾತ್ಮನ ಸಹಾಯವಿಲ್ಲದಿದ್ದರೆ, ಜೀವಾತ್ಮನನ್ನು ತಿದ್ದಲು ಸಾಧ್ಯವಿಲ್ಲ ಎನ್ನುತ್ತಾರೆ. ಹೀಗೆ ವಾಗ್ವಾದ ಮುಂದುವರಿಯುತ್ತದೆ.

ಪರಮಾತ್ಮನ ವಿಚಾರವಾಗಿಯೂ ದಾರ್ಶನಿಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಭೌತವಾದಿಗಳು ಪರಮಾತ್ಮನ ಅಸ್ತಿತ್ವವನ್ನೇ ನಿರಾಕರಿಸುತ್ತಾರೆ. ಅವರು ಸಿಡಿಲು, ಗುಡುಗುಗಳ ಹೆದರಿಕೆಯಿಂದ ಮಾನವನು ಪರಮಾತ್ಮನ ಕಲ್ಪನೆ ಮಾಡಿದನೆಂದು ವಾದಿಸುತ್ತಾರೆ. ಆದರೆ ಜಗತ್ತಿನ ಶ್ರೇಷ್ಠ ನಿರ್ಭೀತ ಋಷಿಗಳು ಪರಮಾತ್ಮನ ಸಾಕ್ಷಾತ್ಕಾರದ ಅನುಭವವನ್ನು ತಿಳಿಸಿ, ಆ ವಾದದ ಅರ್ಥಹೀನತೆಯನ್ನು ತೋರಿಸಿದ್ದಾರೆ. ಅದ್ವೈತವಾದದಲ್ಲಿ ಪರಮಾತ್ಮನು ಚೈತನ್ಯ ಸ್ವರೂಪಿ. ಆದರೆ ಬೇರೆ ದಾರ್ಶನಿಕರು, ಪರಮಾತ್ಮನು ಸರ್ವಶಕ್ತನೆಂದೂ ದಯಾಪರನೆಂದೂ ಹೇಳಿದ್ದಾರೆ. ಹಾಗಾದರೆ, ಜಗತ್ತಿನಲ್ಲಿ ಇಷ್ಟು ವಿಷಮತೆಗಳು ಏಕೆ ಇವೆಯೆಂಬ ಪ್ರಶ್ನೆಗೆ ಯಾರೂ ಉತ್ತರಿಸಲಿಲ್ಲ.

ಹೀಗೆ ದಾರ್ಶನಿಕರಲ್ಲಿ ವಾಗ್ವಾದಗಳು ನಡೆದಿವೆ. ದರ್ಶನ ಶಾಸ್ತ್ರದ ಗುರಿಯು ಪರಮಸತ್ಯವನ್ನು ತಿಳಿಸುವುದು. ನಿಜವಾದ ದಾರ್ಶನಿಕ ಅನುಭವದಲ್ಲಿ ಆ ಸತ್ಯವನ್ನು ಅರಿಯುವವರೆಗೂ ವಿಶ್ರಮಿಸಲಾರ. ಅವನ ಈ ಅನ್ವೇಷಣಾ ಮನೋಧರ್ಮವೇ, ಅನುಭಾವಗಳೇ ದರ್ಶನ ಶಾಸ್ತ್ರದ ಬೆಳವಣಿಗೆಗೆ ಕಾರಣವಾಗಿವೆ.

> ಜಡವಾದಿಗಳು ಸ್ವಾತಂತ್ರ್ಯ ಎಂಬ ಭಾವನೆ ಒಂದು ಭ್ರಾಂತಿ ಎನ್ನುವರು. ಭಾವಸತ್ತಾವಾದಿಗಳು ಬಂಧನವನ್ನು ಸಾರುವ ಭಾವನೆಯೇ ಭ್ರಾಂತಿ ಎನ್ನುವರು. ನೀವು ಏಕಕಾಲದಲ್ಲೇ ಸ್ವತಂತ್ರರು ಮತ್ತು ಅಸ್ವತಂತ್ರರು; ಭೌತಿಕ ದೃಷ್ಟಿಯಿಂದ ಎಂದಿಗೂ ಮುಕ್ತರಲ್ಲ, ಆದರೆ ಆಧ್ಯಾತ್ಮಿಕ ದೃಷ್ಟಿಯಿಂದ ನಿತ್ಯಮುಕ್ತರು ಎಂದು ವೇದಾಂತ ಸಾರುವುದು.
>
> –ಸ್ವಾಮಿ ವಿವೇಕಾನಂದ